ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE: 7/2/20

# ರಾಜಕೀಯಕ್ಕಾಗಿ ವಿರೋಧ

ಉ.ವಾ 7/2/20

## ಎನ್‌ಪಿಆರ್ ವಿವಾದದ ಕುರಿತು ರಾಜ್ಯಸಭೆಯಲ್ಲಿ ಪ್ರಧಾನಿ ಮೋದಿ ಆರೋಪ

ನವದೆಹಲಿ: 'ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್) 2010ರಲ್ಲಿ ಶುರುವಾಗಿತ್ತು. 2015ರಲ್ಲಿ ಮಾಹಿತಿ ಪರಿಷ್ಕರಿಸಲಾಯಿತು. ಆಗ ಇಲ್ಲದ ವಿರೋಧ ಈಗ ಏಕೆ? ಸದ್ಯ ಅದನ್ನು ರಾಜಕೀಯ ಕಾರಣಗಳಿಗಾಗಿಯೇ ಆಕ್ಷೇಪ ಮಾಡಲಾಗುತ್ತಿದೆ'

ಹೀಗೆಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ರಾಜ್ಯಸಭೆಯಲ್ಲಿ ಹೇಳಿದ್ದಾರೆ. ಲೋಕಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ಬಗ್ಗೆ ಧನ್ಯವಾದ ಸಮರ್ಪಿಸುವ ಗೊತ್ತುವಳಿ ಬಗ್ಗೆ ಉತ್ತರ ನೀಡಿದ ಬಳಿಕ ಅವರು ಮೇಲ್ಮನೆಯಲ್ಲಿ ಮಾತನಾಡಿದರು.

ಎನ್‌ಪಿಆರ್ ಎನ್ನುವುದು ಸಾಮಾನ್ಯ ಆಡಳಿತಾತ್ಮಕ ಪ್ರಕ್ರಿಯೆಯಾಗಿದೆ ಎಂದು ಹೇಳಿದ ಅವರು, ಈಗ ಏಕಾಏಕಿ ಅದನ್ನು ವಿವಾದಾತ್ಮಕ ಪ್ರಕ್ರಿಯೆ ಎಂಬಂತೆ ಚಿತ್ರಿಸಲಾಗಿದೆ. ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ ಅದರಲ್ಲಿ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಹೀಗಾಗಿ, ಪ್ರತಿಪಕ್ಷಗಳ ನಾಯಕರೇ ಜನರಿಗೆ ತಪ್ಪುಮಾಹಿತಿ ನೀಡುವ ಪ್ರಯತ್ನ ಮಾಡಬೇಡಿ ಎಂದಿದ್ದಾರೆ.

**ರಾಜಕೀಯ ಕಾರಣಗಳಿಗೆ:** ಸದ್ಯ ಎನ್‌ಪಿಆರ್‌ಗೆ ವ್ಯಕ್ತವಾಗುತ್ತಿರುವ ವಿರೋಧ ಕೇವಲ ಸಂಕುಚಿತ ಮನಸ್ಸಿನ ರಾಜಕೀಯ ಲಾಭಕ್ಕಾಗಿ. ಹಿಂದಿನ ಅವಧಿಯಲ್ಲಿ ಸಂಗ್ರಹಿಸಲಾಗಿರುವ ಎನ್‌ಪಿಆರ್ ದಾಖಲೆಗಳ ಮೂಲಕ ಬಡವರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸಲಾಗುತ್ತದೆ. ಅದೇ ನಿಟ್ಟಿನಲ್ಲಿ ಈ ಬಾರಿಯೂ ಈ ಪ್ರಕ್ರಿಯೆ ನಡೆಯಲಿದೆ ಎಂದಿದ್ದಾರೆ ಮೋದಿ.



> ಪ್ರಧಾನಿ ಮಾಡಿದ ಭಾಷಣ ಹಾಸ್ಯ ಕಾರ್ಯಕ್ರಮ ಮತ್ತು ಕೋಮುವಾದದ ನಡುವೆ ಓಲಾಡುವಂತೆ ಇತ್ತು. ಪಾಕಿಸ್ತಾನವನ್ನು ಅವರು 7 ಬಾರಿ ಪ್ರಸ್ತಾಪಿಸಿರುವುದು ದುರಂತ.
> • ಮನೀಷ್ ತಿವಾರಿ, 'ಕೈ' ವಕ್ತಾರ

### ಸಿಎಂ ಆಗಿದ್ದಾಗ ಪ್ರಸ್ತಾಪಿಸಿದ್ದನ್ನು ಈಗ ಜಾರಿ

ಜಿಎಸ್‌ಟಿ ವಿಳಂಬವಾಗಿ ಜಾರಿಯಾಗಲು ಕಾಂಗ್ರೆಸ್ ಕಾರಣ ಎಂದು ಹೇಳಿದ ಪ್ರಧಾನಿ, ಸದ್ಯ ಅದರಲ್ಲಿ ಹಲವು ಬದಲಾವಣೆಗಳಾಗಿವೆ. ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ತೆರಿಗೆ ವ್ಯವಸ್ಥೆಯಲ್ಲಿನ ನ್ಯೂನತೆಗಳ ಬಗ್ಗೆ ಪ್ರಸ್ತಾಪಿಸಿದ್ದೆ. ನಾನು ಪ್ರಧಾನಿಯಾದ ಬಳಿಕ ಅದನ್ನು ಸರಿಪಡಿಸಿದೆ ಎಂದರು. ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡುವ ರಾಜ್ಯಗಳ ಜತೆಗೆ ಜಿಎಸ್‌ಟಿ ಜಾರಿ ಬಗ್ಗೆ ಚರ್ಚಿಸಬೇಕು ಎಂದಿದ್ದೆ. ದಿ.ಅರುಣ್ ಜೇಟ್ಲಿ ಈ ನಿಟ್ಟಿನಲ್ಲಿಯೂ ಕೆಲಸ ಮಾಡಿದ್ದಾರೆ ಎಂದರು.

**ವೈರುಧ್ಯಗಳ ಮಾಹಿತಿ:** ಸಿಎಎ ವಿರುದ್ಧ ಪ್ರತಿಪಕ್ಷಗಳು ಸುಳ್ಳೇ ಸುಳ್ಳು ಮಾಹಿತಿ ಹರಡುತ್ತಿವೆ. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕೇರಳದಲ್ಲಿ ಸಿಎಎ ವಿರೋಧಿ ಪ್ರತಿಭಟನೆಗಳಲ್ಲಿ ರಾಷ್ಟ್ರ ವಿರೋಧಿ ಶಕ್ತಿಗಳು ಪಾಲ್ಗೊಳ್ಳುತ್ತಿವೆ ಎಂದು ಹೇಳುತ್ತಿದ್ದಾರೆ. ಅವರದ್ದೇ ಪಕ್ಷ ನವದೆಹಲಿಯಲ್ಲಿ ರಾಷ್ಟ್ರ ವಿರೋಧಿ ಶಕ್ತಿಗಳಿಗೆ ಬೆಂಬಲ ನೀಡುತ್ತಿದೆ ಎಂದರು. ಹಲವು ಸಮಯದಿಂದ ಅಜ್ಞಾತರಾಗಿದ್ದ ಪ್ರತಿಪಕ್ಷಗಳ ಕೆಲ ನಾಯಕರು, ಈಗ ಹೊಸ ಕಾಯ್ದೆಗೆ ಅನುಮೋದನೆ ಸಿಕ್ಕಿದ ಬಳಿಕ ಸಕ್ರಿಯರಾಗಿದ್ದಾರೆ ಎಂದರು.

ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರು ಅನುಭವಿಸುತ್ತಿರುವ ಕಷ್ಟಗಳನ್ನು ಪರಿಹರಿಸುವ ನಿಟ್ಟಿನಲ್ಲಿ ರಾಮ ಮನೋಹರ ಲೋಹಿಯಾ, ಲಾಲ್ ಬಹದ್ದೂರ್ ಶಾಸ್ತ್ರಿ ಸಂಸತ್‌ನಲ್ಲಿ ಮಾಡಿರುವ ಭಾಷಣದ ಅಂಶವನ್ನು ಪ್ರಧಾನಿ ಪ್ರಸ್ತಾಪಿಸಿದ್ದಾರೆ.

**ಅರ್ಥ ವ್ಯವಸ್ಥೆ ಭದ್ರವಾಗಿದೆ:** ದೇಶದ ಅರ್ಥ ವ್ಯವಸ್ಥೆಯ ಬಗ್ಗೆ ವ್ಯಕ್ತವಾಗುತ್ತಿರುವ ಹಲವು ಪ್ರತಿರೋಧದ ಅಭಿಪ್ರಾಯಗಳಿಗೆ ಪ್ರತಿಕ್ರಿಯೆ ನೀಡಿದ ಮೋದಿ 'ಅದರ ಮೂಲ ವ್ಯವಸ್ಥೆ ಭದ್ರವಾಗಿಯೇ ಇದೆ. ಜತೆಗೆ ಹೆಚ್ಚಿನ ಅಭಿವೃದ್ಧಿ ಸಾಧಿಸಲು ಸಾಧ್ಯವಿದೆ' ಎಂದಿದ್ದಾರೆ. '5 ಲಕ್ಷಕೋಟಿ ಡಾಲರ್ ಮೌಲ್ಯದ ಅರ್ಥ ವ್ಯವಸ್ಥೆ ಹೊಂದುವುದು ಮಹತ್ವಾಕಾಂಕ್ಷೆಯ ಗುರಿಯೇ ಹೌದು. ನಾವು ದೊಡ್ಡ ಮಟ್ಟದಲ್ಲಿ ಯೋಚಿಸಬೇಕು' ಎಂದಿದ್ದಾರೆ.

**ಫಲಿತಾಂಶ ಬರಲಾರಂಭಿಸಿದೆ:** ಹಿಂದಿನ ಆಡಳಿತದ ಅವಧಿಯಲ್ಲಿ ಘೋಷಣೆ ಮಾಡಲಾಗಿದ್ದ 'ಮೇಕ್ ಇನ್ ಇಂಡಿಯಾ' ದೇಶಿಯವಾಗಿ ಉತ್ಪಾದನಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಜಾರಿ ಮಾಡಲಾಗಿತ್ತು. ಅದು ಈಗ ಫಲಿತಾಂಶ ನೀಡಲಾರಂಭಿಸಿದೆ. ತೆರಿಗೆ ವ್ಯವಸ್ಥೆಯೂ ಸರಳಗೊಂಡಿದೆ ಎಂದರು.

**ಹಲವು ಕ್ರಮಗಳು:** ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಗೊಂಡ ಬಳಿಕ ಇದೇ ಮೊದಲ ಬಾರಿಗೆ ಅಲ್ಲಿ ಭ್ರಷ್ಟಾಚಾರ ನಿಯಂತ್ರಣ ವ್ಯವಸ್ಥೆ ಸ್ಥಾಪಿಸಲಾಗಿದೆ. ದಶಕಗಳ ಬಳಿಕ ಕೇಂದ್ರಾಡಳಿತ ಪ್ರದೇಶದಲ್ಲಿ ಮೀಸಲು ವ್ಯವಸ್ಥೆಯ ಲಾಭ ಸಿಗಲಾರಂಭಿಸಿದೆ. ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬ್ಲಾಕ್ ಅಭಿವೃದ್ಧಿ ಘಟಕಗಳಿಗೆ ಯಶಸ್ವಿ ಚುನಾವಣೆ ನಡೆದಿದೆ ಎಂದು ಹಲವು ಸಾಧನೆಗಳ ವಿವರಗಳನ್ನು ಪ್ರಧಾನಿ ನೀಡಿದ್ದಾರೆ.